ಮುಂದೆಯೇ ಕಾಯುತ್ತಾ ನಿಂತಿದ್ದಳು – ತನ್ನ ಮುಖದಲ್ಲಿ ಒಂದು ಬಗೆಯ ಹೇವರಿಕೆಯನ್ನು ತುಳುಕಿಸುತ್ತ.

ಒಂದು ನಿಮಿಷ ಹಾಗೇ ಕಾದಿದ್ದು, "ತುಪ್ಪ, ಒಂದು ಷಿಲಿಂಗಿಗೆ" ಎಂದಳು. ಮಾತಾಡುವಾಗ ಅವನ ಮುಖ ನೋಡುವುದೇ ಕಿರಿಕಿರಿ ಎನ್ನುವಂತೆ ತನ್ನ ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡಿದ್ದಳು. ಒಂದು ತುಂಡು ಬಟ್ಟೆ ಅವಳ ಮೈ ಮುಚ್ಚಿತ್ತು. ಅದರ ಕೊನೆಯನ್ನು ಕಂಕುಳ ಕೆಳಗೆ ಸಿಕ್ಕಿಸಿಕೊಂಡಿದ್ದಳು. ಮೃದುವಾಗಿದ್ದ ಆ ಹತ್ತಿಯ ಬಟ್ಟೆ ಅವಳ ಸೊಗಸಾದ ಆಕಾರವನ್ನು ಕೊರೆದು ತೋರಿಸುವಂತೆ ಮೈಗಂಟಿಕೊಂಡಿತ್ತು. ಬೋಳಾಗಿಯೇ ಇದ್ದ ಅವಳ ತೋಳುಗಳು ಆ ಮಬ್ಬಿನಲ್ಲಿ ಮಿರುಗುತ್ತಿದ್ದವು. ಹಮೀದ್ ಅವಳ ಕೈಯಿಂದ ಬಟ್ಟಲನ್ನು ಇಸಿದುಕೊಂಡು ತುಪ್ಪವಿದ್ದ ಡಬ್ಬದ ಬಳಿ ಬಗ್ಗಿದ. ಮನಸ್ಸಿನ ತುಂಬ ಏನೋ ಹಂಬಲ, ಇದ್ದಕ್ಕಿದ್ದಂತೆ ಚುಳ್ಳೆಂದ ನೋವು. ಅವನು ಆ ಬಟ್ಟಲನ್ನು ಹಿಂತಿರುಗಿಸಿದಾಗ, ದೂರದಲ್ಲೇನನ್ನೋ ನೋಡುವಂತಿದ್ದ ಅವಳ ಕಣ್ಣುಗಳಲ್ಲಿ ಒಂದು ಬಗೆಯ ದಣಿವಿದ್ದಂತಿತ್ತು. ಇನ್ನೂ ಎಳೆಯ ಹುಡುಗಿ. ಗುಂಡು ಮುಖ, ನೀಳವಾಗಿರುವ ಕುತ್ತಿಗೆ. ಒಂದೂ ಮಾತಿಲ್ಲದೆ ಹಿಂದೆ ತಿರುಗಿದ ಅವಳು ಅಂಗಡಿಯನ್ನು ರಸ್ತೆಯಿಂದ ಬೇರ್ಪಡಿಸಿದ್ದ ಚರಂಡಿಯನ್ನು ಒಂದೇ ನೆಗೆತಕ್ಕೆ ದಾಟಿ ಕತ್ತಲಲ್ಲಿ ಕರಗಿಹೋದಳು. ಹಮೀದ್ ಕಣ್ಮರೆಯಾಗುತ್ತಿದ್ದ ಅವಳ ಆಕೃತಿಯನ್ನೇ ನೋಡುತ್ತಿದ್ದವನು 'ಹುಶಾರು' ಎಂದು ಕೂಗಿ ಹೇಳಬೇಕೆಂದುಕೊಂಡ. ಕತ್ತಲಲ್ಲಿ ಅಪಾಯವೇನೂ ಇಲ್ಲ ಎಂದು ಅವಳಿಗಾದರೂ ಹೇಗೆ ಗೊತ್ತಿರುತ್ತೆ? ಹಾಗೆ ಕೂಗಿ ಹೇಳಬೇಕೆನ್ನುವ ಇರಾದೆಯನ್ನು ಹತ್ತಿಕ್ಕಿದಾಗ ಅವನ ಬಾಯಿಂದ ಮಾತೇ ಹೊರಡಲಿಲ್ಲ. ಅವಳು ಕೂಗಿಕೊಳ್ಳಬಹುದೆಂದು ಕಾದ. ಆದರೆ, ಅವನಿಗೆ ಕೇಳಿಸಿದ್ದು ಕತ್ತಲಲ್ಲಿ ದೂರ ದೂರ ಸರಿದುಹೋಗುತ್ತಿದ್ದ ಅವಳ ಚಪ್ಪಲಿಯ ಸದ್ದು ಮಾತ್ರ.

ಅವಳು ಚಂದದ ಹುಡುಗಿ. ಅವಳ ಬಗ್ಗೆಯೇ ಯೋಚಿಸುತ್ತಾ, ರಾತ್ರಿಯ ಕತ್ತಲಲ್ಲಿ ಅವಳು ಕಣ್ಮರೆಯಾಗುವುದನ್ನೇ ನೋಡುತ್ತಾ ನಿಂತಿದ್ದ ಹಮೀದನಿಗೆ, ಯಾಕೋ ಏನೋ, ತನ್ನ ಬಗ್ಗೆಯೇ ಹೇಸಿಗೆಯೆನಿಸಿತು. ಆಕೆ ತನ್ನನ್ನು ನಿರ್ಲಕ್ಷಿಸಿದ್ದರಲ್ಲಿ ತಪ್ಪೇನಿದೆ? ತನ್ನ ಮೈಯಿಂದ, ಬಾಯಿಂದ ಹಳಸು ವಾಸನೆ ಹೊಡೆಯುತ್ತಿಲ್ಲವೆ? ಎರಡು ದಿನಕ್ಕೊಮ್ಮೆ ಮಾಡುವುದಕ್ಕಿಂತ ಹೆಚ್ಚು ಸಲ ಸ್ನಾನ ಮಾಡುವ ಅಗತ್ಯವಾದರೂ ಏನು? ಹಾಸಿಗೆಯಿಂದ ಎದ್ದು ಅಂಗಡಿಗೆ ಹೋಗುವುದಕ್ಕೆ ಹೆಚ್ಚೆಂದರೆ ಒಂದು ನಿಮಿಷ ಸಾಕು. ಮತ್ತೆ ಅವನು ಬೇರೆಲ್ಲಿಗೂ ಹೋದವನಲ್ಲ. ಯಾಕಾಗಿ ಸ್ನಾನ ಮಾಡಬೇಕು? ಅವನ ಕಾಲುಗಳಂತೂ ವ್ಯಾಯಾಮವೇ ಇಲ್ಲದೆ ಅಸಡ್ಡಾಳವಾಗಿದ್ದವು. ದಿನವಿಡೀ ಜೀತ. ತಿಂಗಳುಗಳು ವರ್ಷಗಳು ಹಾಗೇ ಕಳೆದುಹೋಗುತ್ತಿದ್ದವು. ಸದಾ ಒಂದು ದೊಡ್ಡಿಯಲ್ಲೇ ಇರುವಂತಹ ಸ್ಥಿತಿ. ರಾತ್ರಿ ತನ್ನದೇ ಕೊಳಕಿನಲ್ಲಿ ಮುಳುಗೇಳುವುದಲ್ಲದೆ ಬೇರೆ ದಾರಿಯಿಲ್ಲ ಎಂಬ ಅರಿವಿನಲ್ಲೇ ಅವನು ತೀರ ಬಳಲಿಹೋದವನಂತೆ ಅಂಗಡಿಯ ಬಾಗಿಲು ಹಾಕಿದ.

ಮರುದಿನ ಸಾಯಂಕಾಲ ಆ ಹುಡುಗಿ ಮತ್ತೆ ಅಂಗಡಿಗೆ ಬಂದಳು. ಹಮೀದ್ ಸಾಮಾನ್ಯವಾಗಿ ತಪ್ಪದೆ ಅಂಗಡಿಗೆ ಬರುತ್ತಿದ್ದ ಗಿರಾಕಿ ಮನ್ಸೂರನ ಜೊತೆ ಮಾತಾಡುತ್ತಿದ್ದ. ಅವನಿಗಿಂತ ತುಸು ವಯಸ್ಸಾಗಿದ್ದ ಮನ್ಸೂರ್ ಸಾಕಷ್ಟು ಹತ್ತಿರದಲ್ಲೇ ಇದ್ದವನು, ಸಂಜೆಯ ಹೊತ್ತು ಅಂಗಡಿಗೆ ಬರುತ್ತಿದ್ದವನು. ಕಣ್ಣುಗಳಲ್ಲಿ ಪೊರೆಯಿದ್ದುದರಿಂದ ಅವನಿಗೆ ಅರೆ ಕುರುಡು. ಜನ ಅವನ ವೇದನೆಯ ಬಗ್ಗೆ ಹಗುರವಾಗಿ ಮಾತಾಡುತ್ತ ತುಂಬ ಕ್ರೂರವಾಗಿ ನಡೆದುಕೊಳ್ಳುತ್ತಿದ್ದರು. ಕೆಲವರು ಮನ್ಸೂರನ ಕಣ್ಣುಗಳಲ್ಲಿ ಹೊಲಸು ತುಂಬಿರುವುದರಿಂದಲೇ ಅವನು ಕುರುಡ ಎನ್ನುತ್ತಿದ್ದುದುಂಟು. ಅವನಿಗೆ ಚಂದದ ಹುಡುಗರೆಂದರೆ ತುಂಬಾ ಖಾಯಿಶ್ಶೆಂಬ ಮಾತೂ ಇತ್ತು. ಒಮ್ಮೊಮ್ಮೆ ಹಮೀದನಿಗೆ ಅವನು ತನಗೆಂದೇ ತನ್ನ ಅಂಗಡಿಯ ಬಳಿ ಠಳಾಯಿಸುತ್ತಿರಬಹುದೇ ಎಂಬ ಸಂಶಯವಾದದ್ದೂ ಇದೆ. ಬಹುಶಃ ಅದೆಲ್ಲ ಅಸೂಯೆಯಿಂದ ಹುಟ್ಟಿಕೊಂಡ ಚಾಡಿಮಾತಾಗಿರಬಾರದೇಕೆ? ಹುಡುಗಿ